## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ಹೆಚ್ ಪೂಜಾರ ಇವರು ಮಂಡಿಸಿರುವ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ.

### ವಿಷಯ:-

ದಿನಾಂಕ:08.12.2025 ಸೋಮವಾರದಂದು ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟಣೆಯಾಗಿರುವ "ಜಿಲ್ಲೆಯ ಹೈಸ್ಕೂಲ್ ಶಿಕ್ಷಕರಿಗೆ ಯಾಕೆ ಈ ಶಿಕ್ಷೆ?" ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಣೆಗೊಂಡಿರುವ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಕೋರುತ್ತೇನೆ.

ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರಿಗೆ ಪಾಠ ಬೋಧನೆಗಿಂತ ಇತರ ಕೆಲಸಗಳು ಹೆಚ್ಚಾಗಿರುವುದರಿಂದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ. ಇದರಿಂದ ಅನೇಕ ಪಾಲಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುತ್ತಿದ್ದಾರೆ ಎನ್ನುವ ಮಾತುಗಳು ಬಲವಾಗಿ ಕೇಳಿ ಬರುತ್ತಿದ್ದು, ಇದರಿಂದ ವರ್ಷದಿಂದ ವರ್ಷಕ್ಕೆ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಪ್ರವೇಶಾತಿ ಕಡಿಮೆ ಆಗುತ್ತಿರುವುದು ಅತ್ಯಂತ ದುರ್ದೈವದ ಸಂಗತಿ.

ಇದರಿಂದ ಎಚ್ಚೆತ್ತುಕೊಂಡು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಹೆಚ್ಚೆಚ್ಚು ಶಾಲೆಯಲ್ಲಿ ಇರುವಂತಾಗಬೇಕು ಎನ್ನುವ ಸಲಹೆಗಳು ಇದ್ದರೂ ಸಹ ಅದನ್ನು ಇಲಾಖೆಯ ಹಿರಿಯ ಅಧಿಕಾರಿಗಳು ಪಾಲನೆ ಮಾಡದೇ ಬೇಕಾಬಿಟ್ಟಿಯಾಗಿ ಶಿಕ್ಷಕರನ್ನು ಸಭೆ, ಸಮಾರಂಭ, ಸಮೀಕ್ಷೆ, ತರಬೇತಿ ಎಂದು ಕಳಿಸುತ್ತಿರುವುದರಿಂದ ಅವರು ಶಾಲೆಯಲ್ಲಿ ಇರುವುದಕ್ಕಿಂತ ಹೆಚ್ಚಾಗಿ ಹೊರಗಡೆಯೇ ಇರುವಂತಹ ವಾತಾವರಣ ನಿರ್ಮಾಣವಾಗಿದೆ ಎಂದು ವರದಿಯಾಗಿದೆ.

ಇದಕ್ಕೆ ಉದಾಹರಣೆ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಗಾಗಿ ಎಲ್ಲೆಡೆ ಸಿದ್ಧತೆಗಳು ಜೋರಾಗಿ ನಡೆದಿದ್ದರೆ ಹುನಗುಂದ ತಾಲೂಕಿನಲ್ಲಿ ಮಾತ್ರ ಶಿಕ್ಷಕರಿಗೆ ಸಿಲೆಬಸ್ ಮುಗಿಸಲು ಸಹ ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಮೊದಲು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಇಲಾಖೆ ನಿಯಮ ಮೀರಿ ಹುನಗುಂದ ತಾಲೂಕಿನಲ್ಲಿ ಹಿರಿಯ ಅಧಿಕಾರಿಗಳು ತಮಗೆ ಬೇಕಾದವರನ್ನು ಬದಿಗಿಟ್ಟು ಹೈಸ್ಕೂಲ್ ಶಿಕ್ಷಕರನ್ನು ಸಮೀಕ್ಷೆಗೆ ನೇಮಕ ಮಾಡಿ, ವಿದ್ಯಾರ್ಥಿಗಳ ಪಾಠ ಪ್ರವಚನಕ್ಕೆ ಅಡ್ಡಿಪಡಿಸಿರುವುದು ಎಷ್ಟು ಸರಿ ಎಂದು ಜನರ ಮಾತಾಗಿದೆ.

ಹೈಸ್ಕೂಲ್ ಗಳಲ್ಲಿ ಶಿಕ್ಷಕರಿಲ್ಲದೇ ಇರುವುದರಿಂದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅತ್ಯಂತ ಪರಿಣಾಮ ಬೀರುತ್ತಿದ್ದು, ಈ ಗಂಭೀರ ವಿಷಯವು ಶಿಕ್ಷಕರ ಪ್ರತಿಭಟನೆಗೂ ಕಾರಣವಾಗಿದೆ. ಅಂತಿಮವಾಗಿ ಶಿಕ್ಷಕರ ಕೊರತೆ ನೆಪಹೇಳಿ, ಇದು ಬರೀ ಹುನಗುಂದ ತಾಲೂಕು ಮಾತ್ರವಲ್ಲದೇ ಜಿಲ್ಲೆಯಲ್ಲಿ ಕೊರತೆ ಇರುವಲ್ಲಿ ಹೈಸ್ಕೂಲ್ ಶಿಕ್ಷಕರನ್ನು ನೇಮಕ ಮಾಡಲಾಗಿದೆ ಎಂದು ತೇಪೆ ಹಚ್ಚುತ್ತಿದ್ದಾರೆ ಎಂಬ ವಿಚಾರ ಕೇಳಿ ಬರುತ್ತಿದೆ. ಇದೀಗ ಸೆಕೆಂಡ್ ಸೆಮ್ ಸಿಲೆಬಸ್ ಮುಗಿಸಲು ಶಿಕ್ಷಕರಿಗೆ ನವೆಂಬರ್ ಮತ್ತು ಡಿ. 2 ತಿಂಗಳು ಅವಕಾಶ ಇದ್ದು, ಇದರಲ್ಲಿ 50 ದಿನ ಮಾತ್ರ ಬೋಧನೆಗೆ ಅವಕಾಶ ಇದೆ. ಇದರಲ್ಲಿ ಇದೀಗ ಮತ್ತೆ ಆರು ದಿನದ ತರಬೇತಿ ಎಂದು ನಿಯೋಜಿಸಿದರೆ ಸಿಲೆಬಸ್ ಮುಗಿಸಲು ಆಗಲ್ಲ. ಆದರೆ ಕಾಟಾಚಾರಕ್ಕೆ ಮುಗಿಸಿ, ಕೈತೊಳೆದು ಕೊಳ್ಳಬೇಕಾಗುತ್ತದೆ ಎಂದು ಹೆಸರು ಹೇಳಲಿಚ್ಚಿಸಿದ ಶಿಕ್ಷಕರು ಹೇಳುತ್ತಾರೆ.

ರಾಜ್ಯ ಸರ್ಕಾರವು ಈ ಗಂಭೀರ ವಿಚಾರವನ್ನು ಪರಿಗಣಿಸಿ, ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರಿಗೆ ವಿದ್ಯಾರ್ಥಿಗಳ ಭವಿಷ್ಯದ ಹಿತ ದೃಷ್ಟಿಯಿಂದ ಕೇವಲ ಪಾಠ-ಬೋಧನೆಗಳಿಗೆ ಸೀಮಿತಗೊಳಿಸಿ, ಇತರೆ ಕೆಲಸಗಳಿಂದ ಶಿಕ್ಷಕರನ್ನು ನಿಯೋಜನೆ ಮಾಡದಂತೆ ಕ್ರಮ ಕೈಗೊಳ್ಳುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

**ಉತ್ತರ:**

ದಿನಾಂಕ: 08.12.2025 ಸೋಮವಾರದಂದು ಕನ್ನಡ ದಿನಪತಿಕೆಯಲ್ಲಿ 'ಜಿಲ್ಲೆಯ ಹೈಸ್ಕೂಲ್ ಶಿಕ್ಷಕರಿಗೆ ಯಾಕೆ ಈ ಶಿಕ್ಷೆ" ಎಂಬ ಶೀರ್ಷಿಕೆಯಡಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ಸುದ್ದಿಗೆ ಸಂಬಂಧಿಸಿದಂತೆ, ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಇಳಕಲ್, ಬಾಗಲಕೋಟೆ ಜಿಲ್ಲೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹುನಗುಂದ ತಾಲ್ಲೂಕು ರವರು ವರದಿ ನೀಡಿದ್ದು, ಶಿಕ್ಷಕರಿಗೆ ನೀಡುವ ತರಬೇತಿಯು 2025-26 ನೇ ಸಾಲಿನಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಿರ್ದೇಶಕರು DSERT ರವರ ನಿರ್ದೇಶನದ ಅನುಸಾರ ನೀಡಲಾಗುತ್ತಿದೆ. ಇದರಲ್ಲಿ ಯಾವುದೇ ಶಿಕ್ಷಕರು ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯನಿರ್ವಹಿಸುತ್ತಿಲ್ಲ. ಶಿಕ್ಷಕರಿಗೆ ನೀಡುತ್ತಿರುವ ಈ ತರಬೇತಿಯು ಅವರ ನಿತ್ಯದ ಕೆಲಸಗಳಲ್ಲಿ ವೃತ್ತಿಪರ ಬೆಳವಣಿಗೆಗೆ ಪೂರಕವಾದುದಾಗಿದೆ. ಹಾಗಾಗಿ ಶಿಕ್ಷಕರ ಅನೂಕೂಲಕ್ಕಾಗಿ ಆಯಾ ತಾಲ್ಲೂಕಿನಲ್ಲಿಯೇ ತರಬೇತಿಗಳನ್ನು ಹಮ್ಮಿಕೊಳ್ಳಲಾಗಿದೆ. ಇದರಿಂದ ಯಾವುದೇ ವಾರ್ಷಿಕ ಪಠ್ಯ ಯೋಜನೆಗಳಿಗೆ ಬಾಧಕವಾಗುವುದಿಲ್ಲ. ಈ ತರಬೇತಿಯು ಕೇವಲ ಹುನಗುಂದ ತಾಲೂಕಿನ ಶಿಕ್ಷಕರಿಗೆ ಮಾತ್ರ ನೀಡುತ್ತಿಲ್ಲ. ಶಿಕ್ಷಕರು ಡಿಸೆಂಬರ್‌ನಲ್ಲಿ ಪಠ್ಯಕ್ರಮ (Syllabus) ಮುಗಿಸುವುದಕ್ಕೆ ಯಾವುದೇ ರೀತಿಯಲ್ಲೂ ಅಡ್ಡಿ ಆಗುವುದಿಲ್ಲ.

ಹುನಗುಂದ ತಾಲೂಕಿನ ಎಲ್ಲಾ ಮುಖ್ಯಶಿಕ್ಷಕರು ಪ್ರತಿ ತಿಂಗಳು 29 ಅಂಶಗಳ ಕಾರ್ಯಕ್ರಮದ ಅನುಷ್ಠಾನದ ವರದಿಯನ್ವಯ ತಾಲ್ಲೂಕಿನ ಎಲ್ಲಾ ಶಿಕ್ಷಕರು ಡಿಸೆಂಬರ್ ಅಂತ್ಯಕ್ಕೆ ಪಠ್ಯಕ್ರಮ (Syllabus) ನ್ನು ಮುಗಿಸುತ್ತೇವೆ ಎಂದು ವರದಿಯನ್ನು ನೀಡಿರುತ್ತಾರೆ ಹಾಗೂ 2025-26 ನೇ ಸಾಲಿನ ಎಸ್ ಎಸ್ ಎಲ್ ಸಿ ಫಲಿತಾಂಶ ಸುಧಾರಣೆಗೆ "ಗುರುಗಳು ಬಂದರೆ ಗುರುವಾರ" ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ. ಪ್ರಾಂಶುಪಾಲರು, ಡಯಟ್, ಇಳಕಲ್ ರವರು ಈ ಸುದ್ದಿ ಪ್ರಕಟಿಸಿರುವ ಪತ್ರಿಕೆಯ ಸಂಪಾದಕರು ಸತ್ಯಕ್ಕೆ ದೂರವಾದ ವರದಿಯಾಗಿದೆಯೆಂದು, ಪ್ರಕಟಿಸಿರುವ ವರದಿಯು ನಿರಾಧಾರವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

**ಸಂಖ್ಯೆ: ಇಪಿ 194 ಎಲ್‌ಬಿಪಿ 2025**

**(ಎಸ್ ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**
**ಇಲಾಖಾ ಸಚಿವರು**